## ಪ್ರಗ್ಗು ಕಣ್ಣಲ್ಲಿ ಗುಕೇಶ್

‘ರಿಸೋರ್ಸ್‌ಫುಲ್’ – ಕ್ಯಾಂಡಿಡೇಟ್ಸ್ ಟೂರ್ನಿ ಆರಂಭಕ್ಕೆ ಮೊದಲಿನ ಸಂದರ್ಶನದಲ್ಲಿ ತನ್ನ ಒರಗೆಯ ಆಟಗಾರನನ್ನು ಪ್ರಜ್ಞಾನಂದ ಒಂದೇ ಪದದಲ್ಲಿ ಬಣ್ಣಿಸಿದ್ದು ಹೀಗೆ. ಈ ಮಾತು, ಗುಕೇಶ್ ಬಗೆಗಿನ ಅತ್ಯುತ್ತಮ ವ್ಯಾಖ್ಯೆಗಳಲ್ಲೊಂದು.

ಚೆಸ್ ಮೀಮಾಂಸೆಯಲ್ಲಿ ರಿಸೋರ್ಸ್‌ಫುಲ್‌ನೆಸ್ ಎನ್ನುವ ಶಬ್ದಕ್ಕೆ, ಅನನುಕೂಲ ಸಂದರ್ಭಗಳನ್ನೂ ಅನುಕೂಲರವಾಗಿ ಬಳಸಿಕೊಳ್ಳುವ ಜಾಣ್ಮೆ ಎಂದರ್ಥ; ಲಭ್ಯವಿರುವ ಎಲ್ಲ ಕಾಯಿಗಳ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವ ಚಾಕಚಕ್ಯತೆ ಎಂದೂ ಹೇಳಲಾಗುತ್ತದೆ. ನಿರ್ದಿಷ್ಟ ಪಾನ್‌ಗಳನ್ನು ಬಳಸುವುದರಲ್ಲಿ ಕೆಲವು ಆಟಗಾರರು ವಿಶೇಷ ಜಾಣ್ಮೆ ಹೊಂದಿರುತ್ತಾರೆ. ಗುಕೇಶ್ ಹಾಗಲ್ಲ; ಎಲ್ಲ ಕಾಯಿಗಳ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಕಲೆ ಅವರದು. ಆ ಕಾರಣದಿಂದಲೇ ಎಂತಹುದೇ ಸಂದರ್ಭದಲ್ಲೂ ಅವರು ಆಟವನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಸೋಲಿನ ನೆರಳಿನಿಂದ ಪಾರಾಗುವಲ್ಲಿಯೂ ಅತೀವ ತಾಳ್ಮೆಯಿಂದ ಅವರು ಪಂದ್ಯದ ಮೇಲೆ ಹಿಡಿತ ಸಾಧಿಸಿರುವ ಹಲವು ಉದಾಹರಣೆಗಳಿವೆ.

ಕ್ಯಾಂಡಿಡೇಟ್ಸ್ ಟೂರ್ನಿಯ ಗೆಲುವನ್ನು ಗುಕೇಶ್ ಅವರು ತಮ್ಮ ಹುಟ್ಟುಹಬ್ಬಕ್ಕೆ ತಾವೇ ನೀಡಿಕೊಂಡಿರುವ ಕೊಡುಗೆ ಎಂದೂ ಹೇಳಬಹುದು. 2006ರ ಮೇ 29 ಗುಕೇಶ್ ಜನ್ಮದಿನ. ಅವರಿಗೆ ಹದಿನೆಂಟು ತುಂಬಲಿಕ್ಕೆ ತಿಂಗಳಷ್ಟೇ ಬಾಕಿಯಿದೆ. ಅಧಿಕೃತವಾಗಿ ‘ವಯಸ್ಕರ ಕ್ಲಬ್’ ಸೇರಲಿರುವ ಗುಕೇಶ್‌ಗೆ ಟೊರಾಂಟೊ ಟೂರ್ನಿಯ ಗೆಲುವು ಎಂದೂ ಮರೆಯಲಾಗದ ಉಡುಗೊರೆ.




ಕ್ಯಾಂಡಿಡೇಟ್ಸ್ ಪಂದ್ಯಾವಳಿ ಎರಡೂ ಪಂದ್ಯಗಳಲ್ಲಿ ಸೋಲುಣಿಸಿ ಹಿಕಾರು ನಕಾಮುರಾ ಅವರ ವಿಶ್ವ ಚಾಂಪಿಯನ್ ಪೋಟಿಯ ಕನಸನ್ನು ಭಗ್ನಗೊಳಿಸಿದ ವಿದಿತ್ ಗುಜರಾತಿ

ವೈಯಕ್ತಿಕ ಚಾಂಪಿಯನ್. ಜೊತೆಗೆ ರ್‍ಯಾಪಿಡ್, ಬ್ಲಿಟ್ಜ್ ಚಿನ್ನ ಗೆದ್ದ ತಂಡದಲ್ಲಿ ಆಡಿದ್ದರು.

2018ರ ಮಾರ್ಚ್‌ನಲ್ಲಿ ಐಎಂ (ಇಂಟರ್‌ನ್ಯಾಷನಲ್ ಮಾಸ್ಟರ್) ಪಟ್ಟ. 2019ರ ಜನವರಿಯಲ್ಲಿ ವಿಶ್ವದ ಎರಡನೇ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಬಿರುದು. ಆಗ ಅವರ ವಯಸ್ಸು ಕೇವಲ 12 ವರ್ಷ, ಏಳು ತಿಂಗಳು, 17 ದಿನ. ಕೇವಲ 17 ದಿನಗಳ ಅಂತರದಿಂದ ಸೆರ್ಗೆಯಿ ಕರ್ಯಾಕಿನ್ ದಾಖಲೆ (12 ವರ್ಷ 7 ತಿಂಗಳು) ಅಬಾಧಿತವಾಗುಳಿಯಿತು. 2021ರ ಜೂನ್‌ನಲ್ಲಿ ಅಭಿಮನ್ಯು ಮಿಶ್ರಾ (12 ವರ್ಷ, 4 ತಿಂಗಳು, 25 ದಿನ) ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಆದ ನಂತರ ಗುಕೇಶ್ ಮೂರನೇ ಅತಿ ಕಿರಿಯ ಜಿಎಂ ಎನಿಸಿದ್ದಾರೆ.

ಭಾರತವು ಮೊದಲ ಬಾರಿ – 2022ರಲ್ಲಿ ಚೆಸ್ ಒಲಿಂಪಿಯಾಡ್‌ನ ಆತಿಥ್ಯ ವಹಿಸಿದ್ದಾಗ, ಗುಕೇಶ್ ಅವರ ಸಾಧನೆ ಅಮೋಘವಾಗಿತ್ತು. ಚೆನ್ನೈನಲ್ಲಿ ನಡೆದ ಆ ದೊಡ್ಡ ಟೂರ್ನಿಯಲ್ಲಿ ಭಾರತದ ಎರಡನೇ ತಂಡದಲ್ಲಿದ್ದ ಅವರು ಆಡಿದ ಮೊದಲ ಎಂಟೂ ಪಂದ್ಯಗಳನ್ನು ಗೆದ್ದಿದ್ದು ಅಭೂತಪೂರ್ವ ಸಾಧನೆ. ಒಟ್ಟಾರೆ 11 ಪಂದ್ಯಗಳಿಂದ 9 ಪಾಯಿಂಟ್ ಗಳಿಸಿದ್ದರು. ಮೊದಲ ಬೋರ್ಡ್‌ನ ಚಿನ್ನದ ಪದಕ ಅವರ ಕೊರಳಿಗೆ ಬಿತ್ತು. ಅಗ್ರ ಶ್ರೇಯಾಂಕ ಪಡೆದಿದ್ದ ಅಮೆರಿಕ ವಿರುದ್ಧ ಎಂಟನೇ ಸುತ್ತಿನಲ್ಲಿ 3–1 ಗೆಲುವು ಸಾಧಿಸುವಲ್ಲಿಯೂ ಅವರ ಪಾಲು ದೊಡ್ಡದಿತ್ತು. ಅವರು ಕರುವಾನಾ ವಿರುದ್ಧ ಅನಿರೀಕ್ಷಿತ ಜಯಗಳಿಸಿದ್ದರು. ಒಲಿಂಪಿಯಾಡ್‌ನಲ್ಲಿ ಭಾರತ ತಂಡಕ್ಕೆ ಕಂಚಿನ ಪದಕ ದೊರೆಯಿತು. ಭಾರತಕ್ಕೆ ಇದು ಒಲಿಂಪಿಯಾಡ್‌ನಲ್ಲಿ ಮೊದಲ ಪದಕ. ಇದು ಗುಕೇಶ್ ಅವರನ್ನು ಚೆಸ್ ಜಗತ್ತು ಗಮನಿಸುವಂತೆ ಮಾಡಿತು.

ಈ ವರ್ಷದ ಆರಂಭದಲ್ಲಿ ನೆದರ್ಲೆಂಡ್ಸ್‌ನ ವೈಯ್ಕ್‌ಆನ್ ಝೀ ನಗರದಲ್ಲಿ ನಡೆದ ಟಾಟಾ ಮಾಸ್ಟರ್ಸ್ ಟೂರ್ನಿಯಲ್ಲಿ ಜಂಟಿ ಅಗ್ರಸ್ಥಾನ ಪಡೆದಿದ್ದ ಗುಕೇಶ್ ನಂತರ ಟೈಬ್ರೇಕ್‌ನಲ್ಲಿ ಚೀನಾದ ವೀ ಯಿ ಅವರಿಗೆ ಮಣಿದು ಎರಡನೇ ಸ್ಥಾನ ಪಡೆದಿದ್ದರು.

1980ರ ದಶಕದಲ್ಲಿ ವಿಶ್ವನಾಥನ್ ಆನಂದ್ ಪ್ರವರ್ಧಮಾನಕ್ಕೆ ಬಂದು ದೇಶದಲ್ಲಿ ಚೆಸ್ ಬೆಳೆಯಲು ಅಡಿಪಾಯ ಹಾಕಿಕೊಟ್ಟರು. ಭಾರತದ ಈಗಿನ ಯುವ ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗುತ್ತಿರುವ ರೀತಿ ನೋಡಿದರೆ, ಭಾರತ ವಿಶ್ವದ ಬಲಿಷ್ಠ ಚೆಸ್ ಶಕ್ತಿಯಾಗುತ್ತಿದೆ ಎನ್ನುವ ಮಾತನ್ನು ಗಟ್ಟಿಗೊಳಿಸಿದೆ.

ಅತ್ಯಂತ ಕಠಿಣವಾಗಿದ್ದ ಹಾಗೂ ರೋಚಕವಾಗಿದ್ದ ಈ ಬಾರಿಯ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಪ್ರಜ್ಞಾನಂದ ಐದನೇ ಸ್ಥಾನ ಮತ್ತು ವಿದಿತ್ ಗುಜರಾತಿ ಆರನೇ ಸ್ಥಾನ ಗಳಿಸಿದ್ದು ಕೂಡ ಕಡಿಮೆಯೇನಲ್ಲ. ಮಹಿಳೆಯರ ವಿಭಾಗದಲ್ಲಿ ಕೊನೆರು ಹಂಪಿ ಮತ್ತು ವೈಶಾಲಿ ಅವರ ಸಾಧನೆಯೂ ಗಮನಾರ್ಹ.

ಟೊರಾಂಟೊ ಟೂರ್ನಿ ಆರಂಭಕ್ಕೂ ಮುನ್ನ ಭಾರತೀಯ ಆಟಗಾರರು ಚಾಂಪಿಯನ್ ಆಗುವುದು ಸಾಧ್ಯವೇ ಇಲ್ಲ ಎಂದು ಭವಿಷ್ಯ ನುಡಿದಿದ್ದ ಮ್ಯಾಗ್ನಸ್ ಕಾರ್ಲ್‌ಸನ್, ಟೂರ್ನಿಯ ನಂತರ ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡರು. ‘ಬಹುಶಃ, ನಮ್ಮ ಎಣಿಕೆಗಿಂತಲೂ ಗುಕೇಶ್ ಸಾಮರ್ಥ್ಯ ಹೆಚ್ಚಿನದಿರಬೇಕು’ ಎನ್ನುವ ಅವರ ಮಾತು, ಗುಕೇಶ್‌ಗೆ ಮಾತ್ರವಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿರುವ ಭಾರತದ ಎಲ್ಲ ಯುವ ಚೆಸ್ಸಿಗರಿಗೂ ಅನ್ವಯಿಸುವಂತಹದ್ದು.

ಭಾರತದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿರುವ ಸಂದರ್ಭದಲ್ಲೇ, ಗುಕೇಶ್ ಸೇರಿದಂತೆ ಭಾರತದ ಯುವ ಚೆಸ್ಸಿಗರು ಅಪೂರ್ವ ಸಾಧನೆ ಮೆರೆದಿದ್ದಾರೆ. ಈ ಸಾಧನೆ ಭಾರತೀಯರು ಹೆಮ್ಮೆಯಿಂದ ಬೀಗುವಂತಹದ್ದು. ಅದೇ ಕಾಲಕ್ಕೆ, ಭಾರತೀಯರು ತಮ್ಮ ಗಮನವನ್ನು ಕ್ರಿಕೆಟ್‌ನಿಂದ ಇತರೆ ಕ್ರೀಡೆಗಳತ್ತ ಹರಿಸಲು ಒತ್ತಾಯಿಸುವಂತಹದ್ದು.

ಪ್ರತಿಕ್ರಿಯಿಸಿ: feedback@sudha.co.in